ANNEXURE "B"

Statement showing the details is of Division/Depotwise Revenue, Cost and Prof/Loss of Hassan and Chikkamagalore Division for the year 2005-06

(Rs. in lakh)

Depot	Gross Revenue	Cost	Profit/Loss
Hassan Division			
a) Hassan	2948.46	2779.49	168.97
b) Channarayapatna	1848.03	1852.44	4.41
c) Ramanathapura	1233.22	1160.55	72.67
d) Holenarispura	1400.39	1338.22	62.17
e) Arkalgudu	1082.83	1032.82	50.01
Total	8512.93	8163.52	349.41
Chikkamagalore Division			
a) Chikkamagalore	2998.03	2842.98	155.05
b) Arasikere	2020.05	1955.34	64.71
c) Sakalespura	1946.06	1834.04	112.02
d) Kadur	918.22	873.03	45.19
e) Mudigere	136.32	128.83	7.49
Total	8018.68	7634.22	384.46

318 (342) ಶ್ರೀ ಬಸವರಾಜು ಎ.ಎಸ್ (ಅರಸೀಕೆರೆ) : ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹಾಸನ ಜಿಲ್ಲೆಯಲ್ಲಿ ಮಹಿಳಾ ಅಭಿವೃದ್ಧಿ ನಿಗಮದ ವತಿಯಿಂದ ಸ್ವಯಂ ಉದ್ಯೋಗ ಯೋಜನೆಯಡಿ ಎಷ್ಟು ಫಲಾನುಭವಿಗಳನ್ನು ಗುರುತಿಸಿ ಆಯ್ಕೆ ಮಾಡಿ ಮಂಜೂರಾತಿ ನೀಡಲಾಗಿದೆ; (ತಾಲ್ಲೂಕುವಾರು ವಿವರ ನೀಡುವುದು);

ಆ) ಹಾಸನ ಜಿಲ್ಲೆಗೆ ಯಾವ ಯಾವ ಯೋಜನೆಯಡಿಯಲ್ಲಿ ನಬಾರ್ಡ್ ಮತ್ತು ಇತರೆ ಎಷ್ಟು ಅಂಗನವಾಡಿ ಕಟ್ಟಡಗಳನ್ನು ನಿರ್ಮಿಸಲಾಗಿದೆ; (ತಾಲ್ಲೂಕುವಾರು ವಿವರ ನೀಡುವುದು);

ಇ) ಕೇಂದ್ರದಿಂದ ರಾಜ್ಯಕ್ಕೆ 11300 ಅಂಗನವಾಡಿ ಕೇಂದ್ರಗಳು ಮಂಜೂರಾಗಿದ್ದು ಆ ಕೇಂದ್ರಗಳಿಗೆ ಕಾರ್ಯಕರ್ತೆಯರ ನೇಮಕಾತಿ ಆಗಿದೆಯೇ? ಹಾಗೂ ಈ ಪ್ರಕ್ರಿಯೆ ಯಾವ ಹಂತದಲ್ಲಿದೆ;

ಈ) ಈ ಬಗ್ಗೆ ರಾಜ್ಯ ಸರ್ಕಾರದ ನಿಲುವೇನು;

ಉ) ಗ್ರಾಮೀಣ ಭಾಗದ ಬಡ ಮಹಿಳೆಗೆ (ಗರ್ಭಿಣಿ ಮತ್ತು ಬಾಣಂತಿ) ಹಾಗೂ 6 ವರ್ಷದೊಳಗಿನ ಮಕ್ಕಳಿಗೆ ಸಿಗುವ ಯೋಜನಾ ಸೌಲಭ್ಯಗಳೇನು?

ಶ್ರೀ ಹೆಚ್.ಕೆ. ಕುಮಾರಸ್ವಾಮಿ (ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು):

ಅ) 2006–07ನೇ ಸಾಲಿನಲ್ಲಿ ಹಾಸನ ಜಿಲ್ಲೆಗೆ ಎಲ್ಲಾ ತಾಲ್ಲೂಕುಗಳಿಗೆ ಸೇರಿ ಮುಖ್ಯ ಕ್ರಿಯಾ ಯೋಜನೆಯಲ್ಲಿ 43 ಫಲಾನುಭವಿಗಳನ್ನು ಗುರ್ತಿಸಿ ರೂ. 3,12,500/– ಆರ್ಥಿಕ ನೆರವು ನೀಡಲು ಕ್ರಮ ಕೈಕೊಳ್ಳಲಾಗಿದೆ. ಹಿಂದಿನ ವರ್ಷಗಳಲ್ಲಿ ಬಾಕಿ ಉಳಿದ ಬಡ್ಡಿ ಹಣ ನಿಗಮಕ್ಕೆ ಸೇರಿದ್ದರಲ್ಲಿ ಸ್ತ್ರೀಶಕ್ತಿ ಸಾಲ ಮೇಳಕ್ಕೆ ಸನ್ಮಾನ್ಯ ಮುಖ್ಯಮಂತ್ರಿಗಳಿಂದ ವಿತರಿಸಲು ರೂ. 2,45,000/– ಗಳನ್ನು ಸಹಾಯಧನ ಬಿಡುಗಡೆಗೊಳಿಸಿ ಬ್ಯಾಂಕ್ ವತಿಯಿಂದ ಸಾಲದ ಭಾಗ ಮಂಜೂರು ಮಾಡಲು ಕ್ರಮ ಕೈಗೊಳ್ಳಲಾಗಿದೆ.

ಆ) ನಬಾರ್ಡ್ ಮತ್ತು ಇತರೆ ಯೋಜನೆಗಳಡಿಯಲ್ಲಿ ಒಟ್ಟು 1326 ಅಂಗನವಾಡಿ ಕಟ್ಟಡಗಳನ್ನು ಹಾಸನ ಜಿಲ್ಲೆಯಲ್ಲಿ ನಿರ್ಮಿಸಲಾಗಿದೆ. ತಾಲ್ಲೂಕುವಾರು ವಿವರವನ್ನು ಅನುಬಂಧದಲ್ಲಿ ಒದಗಿಸಿದೆ.

ಇ) ಮಂಜೂರಾಗಿರುವ 11313 ಅಂಗನವಾಡಿ ಕೇಂದ್ರಗಳ ಪೈಕಿ 5462 ಅಂಗನವಾಡಿ ಕೇಂದ್ರಗಳಿಗೆ ಅಂಗನವಾಡಿ, ಕಾರ್ಯಕರ್ತೆಯರ ಆಯ್ಕೆಯಾಗಿದ್ದು, ದಿನಾಂಕ:29–9–2006ರ ರಾಜ್ಯ ಉಚ್ಚನ್ಯಾಯಾಲಯದ ತಡೆಯಾಜ್ಞೆ ಅನ್ವಯ ಉಳಿದ ಕೆಲವು ಕೇಂದ್ರಗಳಿಗೆ ಸಂದರ್ಶನ ನಡೆದಿದ್ದರೂ ನೇಮಕಾತಿ ಆದೇಶ ನೀಡಿರುವುದಿಲ್ಲ.

ಈ) ರಾಜ್ಯ ಉಚ್ಚನ್ಯಾಯಾಲಯದ ತಡೆಯಾಜ್ಞೆ ತೆರವಾದ ನಂತರ ಉಳಿದ ಹುದ್ದೆಗಳಿಗೆ ಆಯ್ಕೆ ಮಾಡಲಾಗುವುದು.

ಉ) ಅಂಗನವಾಡಿ ಕೇಂದ್ರಗಳಲ್ಲಿ ಗರ್ಭಿಣಿ ಮತ್ತು ಭಾಣಂತಿ ಸ್ತ್ರೀಯರಿಗೆ ಹಾಗೂ ಪ್ರಾಯಪೂರ್ವ ಬಾಲಕಿಯರಿಗೆ ರೂ. 3/– ಮೌಲ್ಯದ ಪೂರಕ ಪೌಷ್ಟಿಕ ಆಹಾರವನ್ನು ಆರೋಗ್ಯ ತಪಾಸಣೆ ಹಾಗೂ ಆರೋಗ್ಯ ಮತ್ತು ಪೌಷ್ಟಿಕ ಶಿಕ್ಷಣವನ್ನು ನೀಡಲಾಗುತ್ತಿದೆ. 6 ವರ್ಷದೊಳಗಿನ ಮಕ್ಕಳಿಗೆ ರೂ 2/–ರ ಮೌಲ್ಯದ ಪೂರಕ ಪೌಷ್ಟಿಕ ಆಹಾರವನ್ನು ಹಾಗೂ ಆರೋಗ್ಯ ತಪಾಸಣೆ ಚುಚ್ಚುಮದ್ದಿನ ಸೇವೆ ಹಾಗೂ ಮಾಹಿತಿ ಸೇವೆಯನ್ನು ಒದಗಿಸಲಾಗುತ್ತಿದೆ.

ಅನುಬಂಧ

ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮ

ಮಾನ್ಯ ವಿಧಾನಸಭೆ ಸದಸ್ಯರಾದ ಶ್ರೀ ಬಸವರಾಜು ಎ.ಎಸ್ (ಅರಸೀಕೆರೆ) ರವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ:844ಕ್ಕೆ ಉತ್ತರ:

ತಾಲ್ಲೂಕುವಾರು ವಿವರ	2006–07ರಲ್ಲಿ ಗುರಿ				ಜನವರಿ–07ರ ಅಂತ್ಯದವರೆಗೆ ಫಲಾನುಭವಿಗಳನ್ನು ಗುರುತಿಸಿದ ಸಹಾಯದನ ಮಂಜೂರಾತಿ ನೀಡಿದ ವಿವರ				ಒಟ್ಟು ಸಾಧನೆ		ಷರಾ
	ಮು.ಕ್ಕಿಯೋ		ಹೆ.ಕ್ಕಿಯೋ		ಮು.ಕ್ಕಿಯೋ		ಹೆ.ಕ್ಕಿಯೋ		ಭೌತಿಕ	ಆರ್ಥಿಕ	
	ಭೌತಿಕ	ಆರ್ಥಿಕ	ಭೌತಿಕ	ಆರ್ಥಿಕ	ಭೌತಿಕ	ಆರ್ಥಿಕ	ಭೌತಿಕ	ಆರ್ಥಿಕ			
ಹಾಸನ	3	0.225	5	0.475	2	0.125	5	0.390	7	0.515	
ಅರಸೀಕೆರೆ	3	0.250	3	0.250	4	0.26	–	–	4	0.260	
ಚನ್ನರಾಯಪಟ್ಟಣ	3	0.225	3	0.225	2	0.165	2	0.125	4	0.290	
ಹೊಳೆನರಸೀಪುರ	3	0.225	6	0.400	–	–	2	0.135	2	0.135	
ಬೇಲೂರು	3	0.225	5	0.425	5	0.370	3	0.275	8	0.645	
ಆಲೂರು	1	0.075	3	0.225	–	–	4	0.300	4	0.300	
ಅರಕಲಗೂಡು	2	0.150	3	0.225	2	0.100	1	0.090	3	0.190	
ಸಕಲೇಶಪುರ	2	0.150	3	0.225	4	0.215	7	0.575	11	0.790	
ಒಟ್ಟು	20	1.525	30	2.450	19	1.235	24	1.890	43	3.125	

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂ:844ರ ಅನುಬಂಧ ಅನುಬಂಧ
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ

ಕ್ರ ಸಂ	ಯೋಜನೆಯ ಹೆಸರು	ನಬಾರ್ಡ್ ಯೋಜನೆಯಡಿ ನಿರ್ಮಿಸಿರುವ ಕಟ್ಟಡಗಳ ಸಂಖ್ಯೆ (ವರ್ಷವಾರು)			ನಬಾರ್ಡ್ ಕಟ್ಟಡಗಳು	ಇತರೆ	ಒಟ್ಟು ಸ್ವಂತ	ಷರಾ
		2002–2003	2003–04	2004–05				
1	ಹಾಸನ	5	–	5	10	238	248	
2	ಚನ್ನರಾಯಪಟ್ಟಣ	4	–	–	4	216	220	
3	ಹೊಳೆನರಸೀಪುರ	3	–	5	8	112	120	
4	ಬೇಲೂರು	–	–	–	–	152	152	
5	ಸಕಲೇಶಪುರ	3	–	4	7	123	130	
6	ಆಲೂರು	3	–	4	7	77	84	
7	ಅರಸೀಕೆರೆ	6	3	6	15	222	237	
8	ಅರಕಲಗೂಡು	6	–	3	9	126	135	
	ಒಟ್ಟು	30	3	27	60	1266	1326	